**ಮಾನ್ಯ ವಿಧಾನಪರಿಷತ್ ಸದಸ್ಯರಾದ ಶ್ರೀ ಮುನಿರಾಜು ಗೌಡ ಪಿ.ಎಂ. ರವರು ನಿಯಮ 72ರ ಅಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಕಂದಾಯ ಸಚಿವರ ಹೇಳಿಕೆ:**

**ಪ್ರಶ್ನೆ:- "ಕಂದಾಯ ಇಲಾಖೆಯ ದಾಖಲೆಗಳನ್ನು ಪಡೆಯಲು ಸಾರ್ವಜನಿಕರು ಅಭಿಲೇಖಾಯದ ಮುಂದೆ ದಿನಗಟ್ಟಲೆ ಕಾದು ನಿಲ್ಲುವುದು ಇತ್ತೀಚಿನ ದಿನಗಳಲ್ಲಿ ಸರ್ವೆ ಸಾಮಾನ್ಯವಾಗಿದೆ. ಕೆಲವು ಕಾರ್ಯಾಲಯಗಳಲ್ಲಿ ದಾಖಲೆಗಳು ಇದ್ದಕ್ಕಿದ್ದಂತೆ ಕಾಣೆಯಾಗುತ್ತಿರುವುದು, ಸುಟ್ಟು ಹೋಗಿರುವುದು ಹಾಗೂ ಕೆಲವು ದಾಖಲೆಗಳನ್ನು ತಿರುಚಿರುವ ಉದಾಹರಣೆಗಳಿವೆ.**

**ದಶಕಗಳಿಂದ ಇರುವ ಹಳೆಯ ದಾಖಲೆಗಳನ್ನು ಸ್ಕ್ಯಾನಿಂಗ್ ಮಾಡಿ ಸಂಗ್ರಹ ಮಾಡಲು ಮುಂದಾಗಿರುವ ಸರ್ಕಾರದ ಕ್ರಮ ಸ್ವಾಗತಾರ್ಹ. ಭೂದಾಖಲೆಗಳಿಗೆ ಸಂಬಂಧಿಸಿದಂತೆ ನಡೆಯುವ ಅಕ್ರಮಗಳನ್ನು ತಡೆಯಲು ಹಾಗೂ ಸಾರ್ವಜನಿಕರಿಗೆ ಅಗತ್ಯವಿದ್ದಾಗ ದೊರೆಯಲು ಕಂದಾಯ ಇಲಾಖೆಯ ಎಲ್ಲಾ ದಾಖಲೆಗಳನ್ನು ಡಿಜಿಟಲಿಕರಣ ಮಾಡಿ. ಶೀಘ್ರವಾಗಿ ಸಾರ್ವಜನಿಕರಿಗೆ ಸರಳವಾಗಿ ದೊರೆಯುವಂತೆ ಮಾಡಬೇಕೆಂಬ ಗಂಭೀರ ವಿಷಯವನ್ನು ಮಾನ್ಯ ಕಂದಾಯ ಸಚಿವರ ಗಮನ ಸೆಳೆಯಲು ಬಯಸುತ್ತೇನೆ."**

**ಉತ್ತರ:-**

ರಾಜ್ಯಾದ್ಯಂತ ಕಂದಾಯ ಇಲಾಖೆಯ ದಾಖಲೆಗಳನ್ನು ಸ್ಕ್ಯಾನಿಂಗ್ ಮಾಡಿ ಸಂಗ್ರಹ ಮಾಡಲು ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ.

- ರಾಜ್ಯದ ಎಲ್ಲಾ 31 ಜಿಲ್ಲಾಧಿಕಾರಿಗಳ ಕಛೇರಿ, 53 ಉಪವಿಭಾಗಾಧಿಕಾರಿಗಳ ಕಛೇರಿ ಹಾಗೂ 235 ತಾಲ್ಲೂಕು ಕಛೇರಿಗಳಿಗೆ, ಒಟ್ಟು 319 ಅಭಿಲೇಖಾಲಯಗಳಿಗೆ ತಲಾ ಎರಡು (2) Desktop computers, ಒಂದು (1) Printer with ink bottles ಮತ್ತು ಒಂದು (1) Overhead Scanner ನ್ನು ಜನವರಿ 2023ರಲ್ಲಿ ಒದಗಿಸಲಾಗಿರುತ್ತದೆ.

- ಭೂಮಿ ಉಸ್ತುವಾರಿ ಕೋಶದಿಂದ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಅಪಲೋಡ್ ಮಾಡಲು "**ಕಂದಾಯ ದಾಖಲೆಗಳ ಗಣಕೀಕರಣ**" ಎಂಬ ಹೊಸ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿರುತ್ತದೆ.

ಸದರಿ ತಂತ್ರಾಂಶವನ್ನು ಬಳಸಿಕೊಂಡು ದಾಖಲೆಗಳನ್ನು ಡಿಜಿಟಲೀಕರಣ ಗೊಳಿಸಲು ರಾಜ್ಯಾದ್ಯಂತ ಸಂಬಂಧಿಸಿದ ಅಧಿಕಾರಿ/ ಸಿಬ್ಬಂದಿರವರಿಗೆ ತರಬೇತಿ ನೀಡಲಾಗಿದೆ.

 ರಾಜ್ಯದ ಎಲ್ಲಾ ಪ್ರಾದೇಶಿಕ ಆಯುಕ್ತರು ಹಾಗೂ ಜಿಲ್ಲಾಧಿಕಾರಿಗಳಿಗೆ ತಮ್ಮ ಕಛೇರಿಯ ಸಿಬ್ಬಂದಿಗಳನ್ನೇ ಬಳಸಿಕೊಂಡು ತಮ್ಮ ಹಾಗೂ ತಮ್ಮ ಅಧೀನ ಕಛೇರಿಗಳ ಅಭಿಲೇಖಾಲಯ ಶಾಖೆಯಲ್ಲಿನ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ದಾಖಲೆಗಳನ್ನು "**ಕಂದಾಯ ದಾಖಲೆಗಳ ಗಣಕೀಕರಣ**" Upload ಮಾಡಲು ಕ್ರಮವಹಿಸುವಂತೆ ತಿಳಿಸಲಾಗಿರುತ್ತದೆ.

ಮುಂದುವರೆದು, ಭಾರತ ಸರ್ಕಾರದ Digital India Lan Records Modernization Programme ಯೋಜನೆಯ Modern Record Room Component ಅಡಿಯಲ್ಲಿ ತಾಲ್ಲೂಕು ಕಚೇರಿಗಳ ಅಭಿಲೇಖಾಲಯಗಳ ಆಧುನೀಕರಣಕ್ಕಾಗಿ, ಕರ್ನಾಟಕ ರಾಜ್ಯ ಸರ್ಕಾರದಿಂದ ಅನುದಾನವನ್ನು ಬಿಡುಗಡೆ ಮಾಡಲು ಪ್ರಸ್ತಾವನೆಯನ್ನು ದಿನಾಂಕ:26.10.2023ರಂದು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಸದರಿ ಯೋಜನೆಯಡಿ ಪ್ರತಿ ತಾಲ್ಲೂಕು ಕಛೇರಿಗೆ ರೂ.50.00ಲಕ್ಷಗಳಂತೆ ಒಟ್ಟು 236 ತಾಲ್ಲೂಕುಗಳಿಗೆ ರೂ.118.00ಕೋಟಿಗಳ ಅನುದಾನವನ್ನು (ಹಂತ ಹಂತವಾಗಿ ಮುಂದಿನ 3 ವರ್ಷಗಳಲ್ಲಿ) ಬಿಡುಗಡೆ ಮಾಡಲು ಕೋರಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಕೇಂದ್ರ ಸರ್ಕಾರವು ಶೀಘ್ರವಾಗಿ ಸದರಿ ಅನುದಾನವನ್ನು ಬಿಡುಗಡೆಗೊಳಿಸುವ ಭರವಸೆಯನ್ನು ನೀಡಿದ್ದು, ಸದರಿ ಅನುದಾನವು ಬಿಡುಗಡೆಯಾದಲ್ಲಿ ಅದನ್ನು ಬಳಸಿಕೊಂಡು ರಾಜ್ಯದ ಕಂದಾಯ ದಾಖಲೆಗಳ ಡಿಜಿಟಲೀಕರಣ ಒಳಗೊಂಡಂತೆ ರಾಜ್ಯದ ಎಲ್ಲಾ ಅಭಿಲೇಖಾಲಯಗಳನ್ನು ಆಧುನೀಕರಣಗೊಳಿಸಿ ಸಾರ್ವಜನಿಕರಿಗೆ ಉತ್ತಮ ಸೇವೆಯನ್ನು ನೀಡಲು ಕ್ರಮಕೈಗೊಳ್ಳಲಾಗುವುದು.

ಸಂಖ್ಯೆ:ಕಂಇ 263 ಎಂಆರ್‌ಆರ್ 2023

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು